# ಯೂಟ್ಯೂಬ್ ಗೋ ಸ್ಥಗಿತ!

■ ಶಶಿಕುಮಾರ್ ಸಿ.

ಯೂಟ್ಯೂಬ್‌ನಲ್ಲಿ ಕೋಟ್ಯಂತರ ವಿಡಿಯೊಗಳನ್ನು ಆಫ್‌ಲೈನ್ ಮೂಲಕ ವೀಕ್ಷಿಸುವ ಸೇವೆ ಒದಗಿಸುತ್ತಿರುವ 'ಯೂಟ್ಯೂಬ್ ಗೋ' ಆ್ಯಪ್ ಆಗಸ್ಟ್‌ನಿಂದ ಸ್ಥಗಿತಗೊಳ್ಳಲಿದೆ. ಈ ಬಗ್ಗೆ ಅಧಿಕೃತವಾಗಿ ಗೂಗಲ್ ಒಡೆತನದ ಯೂಟ್ಯೂಬ್ ಘೋಷಿಸಿದೆ. ಗುಣಮಟ್ಟ ಹಾಗೂ ಫೈಲ್ ಗಾತ್ರದಲ್ಲಿ ಆಯ್ಕೆಗಳನ್ನು ನೀಡುವುದರ ಜತೆಗೆ ವಿಡಿಯೊ ಡೌನ್‌ಲೋಡ್ ಮಾಡಿಕೊಳ್ಳಲು ಎಷ್ಟು ಡೇಟಾ ಬೇಕಾಗಲಿದೆ ಎಂಬ ನಿಖರ ಮಾಹಿತಿ ದೊರೆಯುವಂತೆ ಹೊಸ ಆ್ಯಪ್ ಮಾಡುತ್ತಿದೆ. ಡೇಟಾ ಬಳಸದೇ 'ಲೋಕಲ್ ಶೇರಿಂಗ್' ಆಯ್ಕೆಯನ್ನು ಈ ಆ್ಯಪ್ ಒದಗಿಸುತ್ತಿದೆ.

ಪ್ರಿವ್ಯೂ ಯುವರ್ ವಿಡಿಯೊಸ್ ಫಸ್ಟ್, ಕಂಟ್ರೋಲ್ ಯುವರ್ ಡೇಟಾ ಯೂಸ್, ಡೌನ್‌ಲೋಡ್ ಟು ಫೋನ್ ಆರ್ ಎಸ್‌ಡಿ ಕಾರ್ಡ್ ಮತ್ತು ಫ್ರೆಂಡ್ ವಾಟ್ ಯು ವಲ್ ಅಂಡ್ ಮೋರ್ ಎಂಬ ನಾಲ್ಕು ವಿಶೇಷ ಆಯ್ಕೆಗಳೊಂದಿಗೆ ಈ ಆ್ಯಪ್ ಸದ್ಯ ಕಾರ್ಯ ನಿರ್ವಹಿಸುತ್ತಿದೆ. ಇವೆಲ್ಲವೂ ಇದೇ ವರ್ಷದ ಆಗಸ್ಟ್‌ನಿಂದ ಕಾರ್ಯಾಚರಣೆ ನಿಲ್ಲಿಸಲಿವೆ. ಈಗ ಆ ಆ್ಯಪ್ ಬಳಸುತ್ತಿರುವವರು ವಿಡಿಯೊಗಳನ್ನು ನೋಡುವುದಕ್ಕಾಗಿ ಪರ್ಯಾಯವಾಗಿ 'ಯೂಟ್ಯೂಬ್' ಆ್ಯಪ್ ಅನ್ನು ಬಳಸಬಹುದು ಎಂದು ಕಂಪನಿ ತಿಳಿಸಿದೆ.

'ಯೂಟ್ಯೂಬ್ ಗೋ'ಗಿಂತಲೂ ಉತ್ತಮವಾಗಿ ಹಾಗೂ ಹೆಚ್ಚು ಮಂದಿ 'ಯೂಟ್ಯೂಬ್' ಆ್ಯಪ್ ಅನ್ನು ಬಳಸುತ್ತಿದ್ದಾರೆ. ಬಳಕೆದಾರರಿಗೆ ಉತ್ತಮ ಅನುಭವವನ್ನು ಇದು ನೀಡುತ್ತಿದೆ.

ಕಾಮೆಂಟ್, ಪೋಸ್ಟ್, ಕ್ರಿಯೇಟ್ ಕಂಟೆಂಟ್ ಸೇರಿದಂತೆ 'ಯೂಟ್ಯೂಬ್' ಆ್ಯಪ್‌ನಲ್ಲಿರುವ ಎಲ್ಲ ಆಯ್ಕೆಗಳು 'ಯೂಟ್ಯೂಬ್ ಗೋ'ದಲ್ಲಿ ಲಭ್ಯವಿಲ್ಲ. ಆದರೆ ಅವೆಲ್ಲವೂ ಯೂಟ್ಯೂಬ್‌ನಲ್ಲಿವೆ. ಅನೇಕರು ಈ ಬಗ್ಗೆ ಪ್ರಶ್ನಿಸಿದ್ದು, ಹೀಗಾಗಿಯೇ ಯೂಟ್ಯೂಬ್ ಗೋ ಅನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ. 2016ರ ಡಿಸೆಂಬರ್‌ನಲ್ಲಿ 'ಯೂಟ್ಯೂಬ್ ಗೋ' ಕಾರ್ಯಾರಂಭ ಮಾಡಿತ್ತು. ■

## ಟ್ವಿಟರ್ ಬಳಕೆಗೂ ಶುಲ್ಕ!

ಜಗತ್ತಿನ ಪ್ರಮುಖ ಸಾಮಾಜಿಕ ಮಾಧ್ಯಮಗಳಲ್ಲಿ ಒಂದಾಗಿರುವ ಟ್ವಿಟರ್ ಒಡೆಯ ಎಲಾನ್ ಮಸ್ಕ್, ಟ್ವಿಟರ್ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ನಲ್ಲಿ ಕೆಲವೊಂದು ಬದಲಾವಣೆಗೆ ಕೈ ಹಾಕಿದ್ದಾರೆ.

ಭವಿಷ್ಯದಲ್ಲಿ ಟ್ವಿಟರ್ ಖಾತೆ ಎಲ್ಲರಿಗೂ ಉಚಿತವಾಗಿ ಸಿಗುವುದಿಲ್ಲ ಎಂಬರ್ಥದಲ್ಲಿ ಮಸ್ಕ್ ಈಚೆಗೆ ಟ್ವೀಟ್ ಮಾಡಿದ್ದು, ಸಾಮಾನ್ಯ ಬಳಕೆದಾರರಿಗೆ ಟ್ವಿಟರ್ ಸದಾ ಉಚಿತವಾಗಿ ಲಭ್ಯವಾಗಲಿದೆ. ಆದರೆ, ವಾಣಿಜ್ಯ ಹಾಗೂ ಸರ್ಕಾರದ ಬಳಕೆದಾರರಿಗೆ ಅಲ್ಪಮೊತ್ತದ ಶುಲ್ಕ ವಿಧಿಸಬಹುದು' ಎಂದಿದ್ದಾರೆ. ಈ ಮೂಲಕ ಟ್ವಿಟರ್ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ನಲ್ಲಾಗುವ ಮಹತ್ವದ ಬದಲಾವಣೆ ಬಗ್ಗೆ ಅವರು ಸುಳಿವು ನೀಡಿದ್ದಾರೆ.

ಟ್ವಿಟರ್ ಈಗಾಗಲೇ 'ಟ್ವಿಟರ್ ಬ್ಲೂ' ಮೂಲಕ ಪಾವತಿ ಆಧಾರಿತ ಸೇವೆಗಳನ್ನು ನೀಡುತ್ತಿದೆ. ಆ ಸೇವೆಯನ್ನು ಪಡೆಯುತ್ತಿರುವ ಬಳಕೆದಾರರಿಗೆ ಪ್ರೀಮಿಯಂ ಆಯ್ಕೆಗಳು ಮತ್ತು ಬಳಕೆಗೆ ತಕ್ಕಂತೆ ಆ್ಯಪ್‌ನಲ್ಲಿ ಬದಲಾವಣೆ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ.

ಪ್ರಸ್ತುತ ಅಮೆರಿಕ, ಕೆನಡಾ, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನಲ್ಲಿ ಐಒಎಸ್, ಆ್ಯಂಡ್ರಾಯ್ಡ್ ಹಾಗೂ ವೆಬ್ ಆವೃತ್ತಿಯಲ್ಲೂ ಟ್ವಿಟರ್ ಬ್ಲೂ ಲಭ್ಯವಿದೆ. ತಿಂಗಳ ಚಂದಾದಾರಿಕೆ ಆಯ್ಕೆಯನ್ನು ನೀಡಲಾಗುತ್ತಿದೆ.

ಆದರೆ, ಈಗ ಮಸ್ಕ್ ಪ್ರಸ್ತಾಪಿಸಿರುವುದು ಸಾಮಾನ್ಯ ಬಳಕೆದಾರರು ಬಳಸುತ್ತಿರುವ ಟ್ವಿಟರ್ ಬೇಸಿಕ್ ಪ್ಲಾಟ್‌ಫಾರ್ಮ್ ಕುರಿತು. ಅಲ್ಲಿರುವ ವಾಣಿಜ್ಯ ಬಳಕೆದಾರರು ಮತ್ತು ಸರ್ಕಾರದ ಬಳಕೆದಾರರಿಗೆ ಶುಲ್ಕ ವಿಧಿಸುವ ಸಾಧ್ಯತೆಯನ್ನು ಹಂಚಿಕೊಂಡಿದ್ದಾರೆ. ಸಾಮಾನ್ಯ ಬಳಕೆದಾರರನ್ನು ಅದರಿಂದ ಹೊರಗಿಡಲಿದ್ದಾರೆ.

ಟ್ವಿಟರ್ ಅನ್ನು 44 ಬಿಲಿಯನ್ ಡಾಲರ್ (ಸುಮಾರು ₹3.37 ಲಕ್ಷ ಕೋಟಿ) ಮೊತ್ತಕ್ಕೆ ಮಸ್ಕ್ ಖರೀದಿಸುತ್ತಿದ್ದಾರೆ. ಕಂಪನಿಯ ಸಂಪೂರ್ಣ ಷೇರುಗಳನ್ನು ತಮ್ಮದಾಗಿಸಿಕೊಳ್ಳುವ ಮೂಲಕ ಖಾಸಗಿ ಕಂಪನಿಯಾಗಿ ರೂಪಿಸುತ್ತಿರುವ ಬಗ್ಗೆ ಕೆಲವು ಮಾಧ್ಯಮಗಳು ವರದಿ ಮಾಡಿವೆ. ಟ್ವಿಟರ್ ಅನ್ನು ಲಾಭದ ಹಾದಿಗೆರಿಸಲು ಮಸ್ಕ್ ಕಾರ್ಯತಂತ್ರಗಳನ್ನು ಹೆಣೆಯುತ್ತಿದ್ದಾರೆ. ■

# ಕಪ್ಪುಕುಳಿ ಚಿತ್ರ ಅನಾವರಣ!

ನಕ್ಷತ್ರಪುಂಜದ ಮಧ್ಯಭಾಗದಲ್ಲಿರುವ ಬಹುದೊಡ್ಡ 'ಕಪ್ಪುಕುಳಿ'ಯ (ಬ್ಲ್ಯಾಕ್ ಹೋಲ್) ಚಿತ್ರವನ್ನು ಇದೇ ಮೊದಲ ಬಾರಿಗೆ ಖಗೋಳ ಶಾಸ್ತ್ರಜ್ಞರು ಬಿಡುಗಡೆ ಮಾಡಿದ್ದಾರೆ. ಭೂಮಿ ಸಹ ಒಳಗೊಂಡಿರುವ ಮಿಲ್ಕಿವೇ ಕ್ಷೀರಪಥದ ನಕ್ಷತ್ರಪುಂಜದ ಮಧ್ಯಭಾಗದಲ್ಲಿರುವ ಹಾಗೂ ಬೆಳಕಿನ ಉಂಗುರದಂತಿರುವ ಸೂಪರ್ ಮ್ಯಾಸಿವ್ ಕಪ್ಪು ಕುಳಿಯ ಚಿತ್ರ ಇದಾಗಿದ್ದು, ಇದನ್ನು ಸ್ಯಾಜಿಟೇರಿಯಸ್ ಎ* (ಎಸ್ಸಾರ್) ಎಂದು ಹೆಸರಿಸಲಾಗಿದೆ.

ಸೂರ್ಯನಿಗಿಂತ ಗಾತ್ರದಲ್ಲಿ 40 ಲಕ್ಷ ಪಟ್ಟು ದೊಡ್ಡದಾದ ಮತ್ತು ಭೂಮಿಯಿಂದ 27000 ಜ್ಯೋತಿರ್ವರ್ಷ ವರ್ಷಗಳಷ್ಟು ದೂರದಲ್ಲಿರುವ ಕಪ್ಪುಕುಳಿಯ ಚಿತ್ರವನ್ನು ಅಂತರರಾಷ್ಟ್ರೀಯ ಈವೆಂಟ್ ಹರೈಸನ್ ಟೆಲಿಸ್ಕೋಪ್ ಸಹಯೋಗದಿಂದ ಅನಾವರಣಗೊಳಿಸಲಾಗಿದೆ. ಈವೆಂಟ್ ಹರೈಸನ್ ಟೆಲಿಸ್ಕೋಪ್, ಕಪ್ಪು ಕುಳಿಗಳಿಗೆ ಸಂಬಂಧಿಸಿದ ರೇಡಿಯೊ ಮೂಲಗಳನ್ನು ಗಮನಿಸಲು ಒಟ್ಟಾಗಿ ಕೆಲಸ ಮಾಡುವ ವೀಕ್ಷಣಾಲಯಗಳ ಜಾಗತಿಕ ಜಾಲವಾಗಿದೆ. ಅಮೆರಿಕ, ಜರ್ಮನಿ, ಚೀನಾ, ಮೆಕ್ಸಿಕೊ, ಚಿಲಿ, ಜಪಾನ್ ಮತ್ತು ತೈವಾನ್‌ನಲ್ಲಿ ಏಕಕಾಲಿಕ ಸುದ್ದಿ ಸಮ್ಮೇಳನಗಳಲ್ಲಿ ಈ ಚಿತ್ರವನ್ನು ಅನಾವರಣಗೊಳಿಸಲಾಗಿದೆ.



'ಕಪ್ಪುಕುಳಿ ಬಗ್ಗೆ ಸಂಶೋಧನೆ ನಡೆಯುತ್ತಿದ್ದು, ಇದರಿಂದ ನಕ್ಷತ್ರಪುಂಜದ ಕೇಂದ್ರಭಾಗದಲ್ಲಿ ಯಾವ ರೀತಿಯ ವಿದ್ಯಮಾನಗಳು ಜರುಗುತ್ತಿವೆ ಎಂಬುದನ್ನು ಅಧ್ಯಯನ ಮಾಡಲು ಸಹಾಯವಾಗುತ್ತದೆ' ಎಂದು ಖಗೋಳ ವಿಜ್ಞಾನಿಗಳು ಹೇಳಿದ್ದಾರೆ. 'ಕೆಂಪು, ಹಳದಿ ಮತ್ತು ಬಿಳಿ ಬಣ್ಣಗಳಿಂದ ಸುತ್ತುವರೆದಿರುವ ಈ ಚಿತ್ರವು ಕತ್ತಲೆಯ ಸುತ್ತಲಿನ ಪ್ರಕಾಶಮಾನವಾದ ಉಂಗುರವನ್ನು ತೋರಿಸುತ್ತದೆ. ಇದು ಕಪ್ಪು ಕುಳಿಯ ನೆರಳನ್ನು ಸೂಚಿಸುವ ಚಿಹ್ನೆ' ಎಂದು ಅರಿಜೋನಾ ವಿಶ್ವವಿದ್ಯಾಲಯದ ಖಗೋಳ ವಿಜ್ಞಾನಿ ಫೆರ್ಯಾಲ್ ಓಝೆಲ್ ತಿಳಿಸಿದ್ದಾರೆ.

'ಕಪ್ಪುಕುಳಿಗಳು ನಕ್ಷತ್ರಗಳು, ಗ್ರಹಗಳು, ಅನಿಲ, ದೂಳು ಮತ್ತು ಎಲ್ಲಾ ವಿದ್ಯುತ್ಕಾಂತೀಯ ವಿಕಿರಣಗಳು ಸೇರಿದಂತೆ ತನ್ನ ಕ್ಷೀರಪಥದಲ್ಲಿರುವ ಎಲ್ಲಾ ವಸ್ತುಗಳನ್ನು ಸೆಳೆಯುತ್ತವೆ. ಹಾಗಾಗಿ, ಇದು ಬ್ರಹ್ಮಾಂಡದಲ್ಲಿನ ಅನೇಕ ವಿಸ್ಮಯಗಳ ಆಗರವಾಗಿವೆ' ಎಂದು ಈಗಾಗಲೇ ವಿಜ್ಞಾನಿಗಳು ಅನ್ವೇಷಣೆಯಿಂದ ಕಂಡುಕೊಂಡಿರುವ ಸತ್ಯ. ■